view, Government have decided that the power cuts should be enhanced as follows with immediate effect.—

	Category	Present level of cuts (%)	Revised level of cuts (%)
1	A.E.H.	25	35
2	LT Power	20	30
3	Commercial lighting	35	45
4	Domestic lighting	—	10
5	HT unrestricted category	10	20
6	100 to 250 KVA	20	30
7	251 to 1000 KVA	40	50
8	1000 to 5000 KVA	50	60
9	5001 and above	70	80
10	Textiles. fertilisers & newsprint.	30	40

It is also considered absolutely essential to conserve power and to limitthe usageto the availabilty, all rural feeders will be supplied with power between 2.00 PM and 6.00 AM only, Public lighting like streetlighting also will be restricted between 7.00 PM and 6.00 AM only

Government appeals to every consumer through this House that it has become necessary to practice austerity measures owing to the unprecedented failure of monsoons.

An appeal is also being made to employees of K.E.B.to recognise the grave situation and come forward to save electricity and also try to assist K.E.B. in all efforts including mobilisation of resources It has to be mentioned that with all these meacures, it is necessary to review the power situation again by the middle of December 1987 and take such corrective measures as would be necessary.

ಅಧ್ಯಕ್ಷರು.— ಈಗ ಮಾನ್ಯ ಮೊಯ್ಲಿ ಅವರು ಕೊಟ್ಟಿರುವಂತಹ ನಿಲುವಳಿ ಸೂಚನೆ ಬಗ್ಗೆ ಏನಾದರೂ ಹೇಳುವುದಿದ್ದರೆ ಹೇಳಬಹುದು.

ನಿಲುವಳಿ ಸೂಚನೆ

ಮಂಗಳೂರು ರಸಗೊಬ್ಬರ ಕಾರ್ಖಾನೆ ಮುಚ್ಚಿರುವುದು

(ಮುಂದೆಗೆ ಅನುಮತಿ ಕೋರಿಕೆ)

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಅಧ್ಯಕ್ಷರೇ, ಮಂಗಳೂರಿನಲ್ಲಿರುವಂತಹ ರಸಗೊಬ್ಬರದ ಕಾರ್ಖಾನೆ ಕಳೆದ ಜುಲೈ ಒಂದರಿಂದ ನಡೆಯುತ್ತಿಲ್ಲ. ಇದರಿಂದ ಒಂದೊಂದು ದಿವಸದ ಉತ್ಪಾದನೆ...

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಕೈಗಾರಿಕಾ ಮಂತ್ರಿಗಳು ಈಗ ಮಾಡಿದಂಥ ಸ್ಟೇಟ್‌ಮೆಂಟ್‌ನಿಂದ ಇಡೀ ರಾಜ್ಯವೇ ಕತ್ತಲಾಗುತ್ತದೆ. ಆದ್ದರಿಂದ ಈ ಬಗ್ಗೆ ಒಂದೆರಡು ವಿಚಾರಗಳನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ.

ಅಧ್ಯಕ್ಷರು.—ನಿಯಮದ ಪ್ರಕಾರ ಕ್ಲಾರಿಫಿಕೇಷನ್ ಕೇಳಲು ಬರುವುದಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಕ್ಲಾರಿಫಿಕೇಷನ್ ಕೇಳಲು ನಿಯಮ ಆಡ್ಡ ಬಂದರೆ, ಅದನ್ನು ಸಸ್ಪೆಂಡ್ ಮಾಡುವಂತಹ ಅಧಿಕಾರವನ್ನು ನಿಮಗೆ ಕೊಟ್ಟಿದ್ದೇವೆ. ಆದ್ದರಿಂದ...

ಅಧ್ಯಕ್ಷರು.—ನಾನು ಅದನ್ನು ಸಸ್ಪೆಂಡ್ ಮಾಡುವುದಿಲ್ಲ. ಈಗ ನಿಯಮವನ್ನು ಸಸ್ಪೆಂಡ್ ಮಾಡುವಂತಹ ಅವಕಾಶವೂ ಸಹ ಬಂದಿಲ್ಲ.

SRI K. H. PATIL.—We are not ment for rules. Rules are meant for us.

MR. SPEAKER.—The rule says :

> "A statement may be made by a Minister on matter of public importance with the consent of the Speaker, but no question shall be asked at the time statement is made."

ವೀರಪ್ಪ ಮೊಯಿಲಿಯವರೇ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನಮ್ಮ ಸ್ನೇಹಿತರು ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್ ಫ್ಯಾಕ್ಟರಿಯ ಉತ್ಪಾದನೆ ಕುಂಠಿತವಾಗಿರುವ ಬಗ್ಗೆ ಹೇಳಿದ್ದಾರೆ. ಜುಲೈ ಒಂದನೇ ತಾರೀಖಿನಿಂದ ಉತ್ಪಾದನೆ ಸ್ಥಗಿತವಾಗಿದೆ. ದಿವಸಕ್ಕೆ ೪೫ ಲಕ್ಷ ರೂಪಾಯಿಗಳ ಉತ್ಪಾದನೆ ನಿಂತಿದೆ, ಇದುವರೆಗೆ ೩೫ ಕೋಟಿ ರೂಪಾಯಿಗಳಷ್ಟು ಉತ್ಪಾದನೆ ನಿಂತು ಹೋಗಿದೆ. ಈ ಫ್ಯಾಕ್ಟರಿ ನಡೆಯುವುದಕ್ಕೆ ಕಷ್ಟವಾಗಿದೆ. ಅದರಲ್ಲೂ ನಡೆಯಂತಕ್ಕಂಥ ಕೈಗಾರಿಕೆ ಸರ್ಕಾರದ ನಿರ್ಲಿಪ್ತತೆಯಿಂದ ಅಥವಾ ನಿರ್ಲಕ್ಷ್ಯದಿಂದ, ಕಾರ್ಮಿಕ ವಿರೋಧಿ ನೀತಿಯಿಂದ ನಿಂತಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಾಗಲಿಕ್ಕಿಲ್ಲ. ಆದ್ದರಿಂದ ಅದರ ಬಗ್ಗೆ ಇವತ್ತು ಚರ್ಚೆ ಮಾಡಬೇಕು. ಅಲ್ಲಿ ೩೦೪ ಜನರು ತೀವ್ರವಾಗಿ ಗಾಯಗೊಂಡಿದ್ದಾರೆ. ತೀವ್ರವಾಗಿ ಸ್ವಾರ್ಡ್‌ನಿಂದ, ಕತ್ತಿಯಿಂದ ಹೊಡೆದು ಬಿಟ್ಟಿದ್ದಾರೆ. Criminally intimidating not to owe allegiance to INTUC affiliated unions. ಅಲ್ಲಿ ಯೂನಿಯನ್ ಇದೆ, ಅದರಲ್ಲಿ ತಮ್ಮ ಪಕ್ಷದವರು ಒಬ್ಬರು ಇದ್ದಾರೆ. ಆ ಯೂನಿಯನ್‌ನನ್ನು ಸಂರಕ್ಷಣೆ ಮಾಡಬೇಕು, at what cost ? 35 crores just to sustain the Union which has already lost the majority. ಇದರಲ್ಲಿ ಕಾನೂನು ಪ್ರಕಾರ ರಹಸ್ಯ ಮತದಾನ ಮಾಡಿಕೊಳ್ಳಿ, ಚೆಕ್ ಆಫ್ ಸಿಸ್ಟಂ ಮಾಡಿಕೊಳ್ಳಿ, ಯಾವುದಾದರೂ ಒಂದು ಕ್ರಮವನ್ನು ಅನುಸರಿಸಿ ಮೆಜಾರಿಟಿ ಇದೆ ಎಂದು ಖಚಿತ ಪಡಿಸಿಕೊಳ್ಳಿ ಎಂದು ನಾವು ಹೇಳಿದ್ದೇವೆ. ಅಲ್ಲಿ ೫೫ ಜನರನ್ನು ಟರ್ಮಿನೇಟ್ ಮಾಡಿದ್ದಾರೆ. ಇನ್ನೂ ಎರಡು ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಸುಮಾರು ೧೨ ಜನ ಕಾರ್ಮಿಕರನ್ನು ಅಮಾನತ್ತು ಮಾಡಿ, ಸುಮಾರು ೫೫ ಜನರನ್ನು ಟರ್ಮಿನೇಟ್ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದು ಪ್ರಾಮುಖ್ಯವಾದಂಥ ಕೈಗಾರಿಕೆ. ಈ ಕಾರ್ಖಾನೆಯನ್ನು ನಂಬಿ ಸಾವಿರಾರು ಕಾರ್ಮಿಕರು ಜೀವನ ಮಾಡುತ್ತಿದ್ದರು. ೧೩ನೇ ತಾರೀಖು ನಮ್ಮ ಎಲ್ಲಾ ಶಾಸಕರು ಮಾನ್ಯ ಮುಖ್ಯಮಂತ್ರಿಗಳನ್ನೂ ಭೇಟಿ ಮಾಡಿ ಈ ಸಸ್ಪೆನ್‌ಷನ್‌ನನ್ನು ರದ್ದು ಮಾಡಿ, ರಹಸ್ಯ ಮತದಾನದ ಮೂಲಕ, ಪ್ರಜಾಪ್ರಭುತ್ವದ ಪ್ರಕಾರ ಮಾಡಿ ಎಂದು ಕೂಡ ನಾವು ಹೇಳಿದೆವು. ಮೊನ್ನೆ ಜುಲೈ ೨೭ನೇ ತಾರೀಖಿನಿಂದ ಅಲ್ಲಿ ಅನಿರ್ದಿಷ್ಟ ಉಪವಾಸ ನಡೆಯುತ್ತಾ ಇದೆ. ೪ ಜನ ಇವತ್ತು ಆಸ್ಪತ್ರೆಯಲ್ಲಿ ಬಹಳ ಗಂಭೀರವಾದ ಪರಿಸ್ಥಿತಿಯಲ್ಲಿದ್ದಾರೆ. ಮಾನ್ಯ ಕೆ. ಹೆಚ್. ಪಾಟೀಲರೂ ಕೂಡ ಹೇಳಿದರು. ಅಲ್ಲಿ ಇವತ್ತಿನವರೆಗೆ ಕಾರ್ಮಿಕರು ಶಾಂತಿಯುತವಾಗಿ ಮುಷ್ಕರ ಮಾಡುತ್ತಾ ಇದ್ದಾರೆ, ಯಾವುದೇ ಬೆದರಿಕೆಯ ಮಾತನ್ನು ಆಡಿಲ್ಲ. ಅವರನ್ನು ಸದೆಬಡಿಯಬೇಕು ಎಂದು ೪ ಜನರಿಗೆ ಗಾಯ ಮಾಡಿದ್ದಾರೆ. ಮಾನ್ಯ ಕಾರ್ಮಿಕ

ಸಚಿವರು ಹೇಳಿಕೆ ಕೊಡಬೇಕು. ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ, ಇದು ಬಹಳ ಪ್ರಮುಖವಾದಂಥ ವಿಚಾರ. ಇದು ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಪರಿಸ್ಥಿತಿ ಅಲ್ಲ, ಇಡೀ ಕರ್ನಾಟಕದ ರೈತರ ಸಮಸ್ಯೆ ಕೂಡ ಇದೆ. ಇವತ್ತು ಫರ್ಟಿಲೈಸರ್ ಉತ್ಪಾದನೆ ಮಾಡತಕ್ಕಂಥ ಕೈಗಾರಿಕೆ ನಿಂತು ಹೋಗಿದೆ. ಇದರಿಂದ ಇಡೀ ದೇಶಕ್ಕೆ ನಷ್ಟವಾಗಿದೆ. ಈ ಬಗ್ಗೆ ಬೇಕಾದಂಥ ಎಲ್ಲ ಕೋ-ಆಪರೇಷನ್‌ನನ್ನು ನಾವೆಲ್ಲಾ ಶಾಸಕರು ಕೊಡಲಿಕ್ಕೆ ತಯಾರಿದ್ದೇವೆ. ಒಂದು ಆಶ್ಚರ್ಯವೆಂದರೆ, ೬೦ ದಿವಸ ಆಯಿತು. ಒಂದು ದಿವಸವೂ ಕೂಡ ಲೇಬರ್ ಕಮಿಷನರ್ ಕನ್ಸಿಲಿಯೇಷನ್‌ಗೆ ಕರೆಯಲಿಲ್ಲ ಅಂದರೆ ಏನು ಉದ್ದೇಶ ತಪ್ಪಿದಂ. ಒಂದು ದಿವಸ ಅಸಿಸ್ಟೆಂಟ್ ಲೇಬರ್ ಕಮಿಷನರ್ ಡಿಸ್ಕಷನ್‌ಗೆ ಕರೆದಿದ್ದಾರೆ, ಒಂದು ದಿವಸ ಲೇಬರ್ ಕಮಿಷನರ್ ಡಿಸ್ಕಷನ್‌ಗೆ ಕರೆದಿದ್ದಾರೆ. ಆದರೆ ಒಂದು ದಿವಸವೂ ಕೂಡ ಕನ್ಸಿಲಿಯೇಷನ್‌ಗೆ ಕರೆಯಲಿಲ್ಲ ಅಂದರೆ ಎಷ್ಟರಮಟ್ಟಿಗೆ ಸರ್ಕಾರ ಈ ಬಗ್ಗೆ ನಿರ್ಲಕ್ಷ್ಯ ಧೋರಣೆ ತಾಳಿದೆ ಎನ್ನುವುದು ಅರ್ಥವಾಗತ್ತದೆ. ಈ ಕಾರ್ಮಿಕರು ಶಾಂತಿಯುತವಾಗಿ ಪ್ರಜಾಪ್ರಭುತ್ವ ವಿಧಾನದಲ್ಲಿ ಸತ್ಯಾಗ್ರಹ ಮಾಡಿದ್ದಿ ತಪ್ಪೇ, ಅಥವಾ ಹಿಂಸಾತ್ಮಕ ರೂಪದಲ್ಲಿ ಮಾಡಿದರೆ ಮಾತ್ರ ಸರ್ಕಾರ ನೋಡುವುದಾದರೆ ತೊಂದರೆಯಾಗತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ಇವತ್ತೇ ಈ ವಿಚಾರದ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಸರ್ಕಾರದವರು ಇವತ್ತು ಹೇಳಿಕೆ ಕೊಡ ಬೇಕು. ಇವತ್ತೇ ನಿರ್ಣಯ ಆಗಬೇಕು, ಪರಿಹಾರ ಕೊಡಬೇಕು. ಇದೇ ಧೋರಣೆ ಮೇಲೆ ಸರ್ಕಾರ ನಿಂತರೆ ಇಡೀ ದೇಶಕ್ಕೆ ನಷ್ಟ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳಿಗೆ, ಮಾನ್ಯ ಕೈಗಾರಿಕಾ ಮಂತ್ರಿ ಗಳಿಗೆ ಈ ಬಗ್ಗೆ ತಕ್ಷಣ ನಿರ್ಣಯ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ, ಜಂಟಿ ನಿಯೋ ತಾರೀಖು ಭೇಟಿ ಯಾಗಿದ್ದೇವೆ. ಇದಂವರೆಗೆ ಕನ್ಸಿಲಿಯೇಷನ್ ಇಲ್ಲ. ನಿರ್ಣಯ ಇಲ್ಲ. ಆದಂದರಿಂದ ತಾವು ಈ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರಿ ಎಸ್. ಬಂಗಾರಪ್ಪ.—**ಚರ್ಚೆಗೆ ಅವಕಾಶ ಕೊಡುವುದಾದರೆ ನಮ್ಮ ಅಡ್ಡಿ ಇಲ್ಲ.**

ಅಧ್ಯಕ್ಷರು.—ಅವರು ಏನನ್ನು ಹೇಳುತ್ತಾರೋ ಸ್ವಲ್ಪ ಕೇಳಿ.

ಶ್ರೀ ಜೆ. ಹೆಚ್. ಪಟೇಲ್.—ಅಗತ್ಯವಾಗಿ ಚರ್ಚೆ ಮಾಡೋಣ.

ಶ್ರೀ ಎಸ್. ಬಂಗಾರಪ್ಪ.—ಚರ್ಚೆಗೆ ಒಪ್ಪುವುದಾದರೆ, ನಾನು ಮತ್ತೆ ಏನೂ ಹೇಳಬೇಕಾಗಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಚರ್ಚೆ ಮಾಡೋಣ. ಇಲ್ಲಿ ನಮ್ಮ ಪಕ್ಷದ ಯೂನಿಯನ್, ಇನ್ನೊಂದು ಪಕ್ಷದ ಯೂನಿಯನ್ ಮುಖ್ಯವಲ್ಲ, ಕೈಗಾರಿಕೆ ಉಳಿಯಬೇಕು.

ಶ್ರೀ ಎಸ್. ಬಂಗಾರಪ್ಪ.—**ಚರ್ಚೆ ಮಾಡುವುದಕ್ಕೆ ತಾವು ಒಪ್ಪಿ.**

ಶ್ರೀ ಜೆ. ಹೆಚ್. ಪಟೇಲ್.—ದಾರಾಳವಾಗಿ **ಚರ್ಚೆ ಮಾಡೋಣ.**

ಅಧ್ಯಕ್ಷರು.—ಅವರು ಅರ್ಧ ಗಂಟೆ ಭಾಷಣ ಮಾಡಲಿ, ನೀವು ಅರ್ಧ ಗಂಟೆ ಭಾಷಣ ಮಾಡಿ. ಅವರದ್ದು ನಿಮ್ಮದ್ದು ಸೈಡ್ ಬೈ ಸೈಡ್ ಮಾಡೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಟೆಕ್ಸ್‌ಟೈಲ್ ಮಿಲ್‌ಗೆ ಸಂಬಂದಪಟ್ಟಂತೆ ಬೇರೆ ಇವತ್ತು ಚರ್ಚೆ ಇದೆ.

ಶ್ರೀ ಎಸ್. ಬಂಗಾರಪ್ಪ.—**ಟೆಕ್ಸ್‌ಟೈಲ್ ತೆಗೆದುಕೊಂಡು ಹೋಗಿ ಗೊಬ್ಬರಕ್ಕೆ ಹಾಕುವುದು, ಗೊಬ್ಬರ ತೆಗೆದುಕೊಂಡು ಹೋಗಿ ಟೆಕ್ಸ್‌ಟೈಲ್‌ಗೆ ಹಾಕಲವುದು ಸರಿಯಲ್ಲ.**

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ನಿನ್ನೆ **ಅಡ್ಜರ್ನಮೆಂಟ್ ನೋಟೀಸ್ ಕೊಟ್ಟಮೇಲೆ ಚರ್ಚೆಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದಿರಿ.** ಆದರೆ, ಮಾನ್ಯ ಮುಖ್ಯಮಂತ್ರಿಯವರು ರಶೀದ್ ಬಗ್ಗೆ.....

ಅಧ್ಯಕ್ಷರು.—ನಿನ್ನೆ ಉತ್ತರ ಹೇಳಿದ್ದಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮತ್ತೊಂದು ಅಡ್ಜರ್ನಮೆಂಟ್ ಮೋಷನ್ ನೋಟೀಸ್ ಕೂಡಿ ಚರ್ಚೆ ಆಮೇಲೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನಿನ್ನೆ ಭಾಷಣ ಮಾಡಿದ್ದೀರಿ. ಇವತ್ತು ಮಹತ್ವದ ವಿಚಾರ ಇದೆ, ನೀವುಗಳು ಭಾಷಣ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಂ. ಎ. ರಶೀದ್ ಬಗ್ಗೆ ಮಧ್ಯಾಹ್ನ ಚರ್ಚೆ ಮಾಡುವುದಕ್ಕೆ ಅವಕಾಶಕೊಡಿ.

ಅಧ್ಯಕ್ಷರು.—ಎಂ. ಎ. ರಶೀದೂ ಇಲ್ಲ. ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಹೇಳಿಕೆ ಕೊಡುವುದಿಲ್ಲ ಎಂದು.....

ಅಧ್ಯಕ್ಷರು.—ಇವತ್ತು ಬರಗಾಲದ ಬಗ್ಗೆ ಮಹತ್ವದ ಚರ್ಚೆ ಇದೆ. ನಡುವೆ ಯಾವುದೂ ಬೇಡ. ರಶೀದನ ಚರ್ಚೆ ನಿನ್ನೆಯೇ ಮುಗಿದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪಿಷ್ಟರ್ಷನ್ ಪಾಯಿಂಟ್ ನೋಟೀಸ್ ಕೊಡಿ, ಚರ್ಚೆ ಆಮೇಲೆ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ.

ಅಧ್ಯಕ್ಷರು.—ನಾನು ಹಾಗೇ ಹೇಳಿಲ್ಲ. ದಯವಿಟ್ಟು ಕುಳಿತುಕೊಳ್ಳಿ ಬರಗಾಲದ ಬಗ್ಗೆ ಚರ್ಚೆ ಶುರು ಮಾಡೋಣ.

ಮುನವಿಗಳು : 1) ರಶೀದ್ ಅಡ್ವೋಕೇಟ್, ಇವರ ಕೊಲೆಯ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ನೂರಾರು ವಕೀಲರು ಗಳನ್ನು ಭೇಟಿಯಾಗಿ, ಇಲ್ಲಿ ಸದನದಲ್ಲಿ ಸ್ಟೇಟ್‌ಮೆಂಟ್ ಕೊಡುವುದಿಲ್ಲವೆಂದು ಹೇಳಿ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದರಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಕೆಲವು ರಾಜ್ಯಕೀಯ ವ್ಯಕ್ತಿಗಳ ಕೈವಾಡ, ಹಣ ಉಳ್ಳವರ ಕೈವಾಡ ಇದೆಯೆಂದು ಕೂಡ ಪ್ರಸ್ತಾಪ ಮಾಡಿದ್ದಾರೆ. ಯಾವ ವಿಷಯವನ್ನು ಸದನಕ್ಕೆ ಹೇಳಿಲ್ಲವೋ ಅದನ್ನು ಪ್ರೆಸ್‌ನಲ್ಲಿ ಹೇಳಿದ್ದಾಕೆ.

ಅಧ್ಯಕ್ಷರು.—ಬರಗಾಲದ ಬಗ್ಗೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಏನು ಪ್ರಸ್ತಾಪ ಮಾಡುತ್ತೇವೆನ್ನುವುದನ್ನು ಕೂಡ ಕೇಳದೆ ತಾವು ನಿನ್ನೆ ಸದನವನ್ನು ಮುಂದೂಡಿ ಹೋದಿರಿ. ವಿಷಯವನ್ನು ಪ್ರಸ್ತಾಪ ಮಾಡುವುದಕೆ ಅವಕಾಶ ಕೊಡಬೇಡವೆ ?

ಅಧ್ಯಕ್ಷರು.—ವಿಷಯ ನಿನ್ನೆಯೇ ಮುಕ್ತಾಯವಾಗಿದೆ, ಮುಖ್ಯಮಂತ್ರಿಯವರು ಸಿ.ಬಿ.ಐ. ಎನ್‌ಕ್ವೈರಿ ಮಾಡಿಸುವುದಕ್ಕೆ ತಿಳಿಸಿದ್ದೇವೆಂದು ಹೇಳಿದ್ದಾರೆ. ತಾವು ಈಗ ಯಾವ ನಿಯಮದ ಪ್ರಕಾರ ಹೇಳುವುದಕ್ಕೆ ಹೊರಟಿದ್ದೀರಿ.

(ಗೊಂದಲ)

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ಬರಗಾಲದ ಪರಿಸ್ಥಿತಿಯ ಬಗ್ಗೆ ಮಾತನಾಡಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ತಾವು ಯಾವ ನಿಯಮ ಎಂದು ಕೇಳಿದಿರಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರೆಲ್ಲರೂ ದಯವಿಟ್ಟು ಕುಳಿತುಕೊಳ್ಳಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ತಾವು ಒಂದೇ ಸಾರಿಗೆ ಈ ರೀತಿ ಹೇಳಿದರೆ ನಾವು ಏನು ಮಾಡಬೇಕು.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.